**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ. 209–15**

| | | |
|---|---|---|
| ಹೆಸರು | ರಾಮಾಂಜಿ | ಪ್ರಾ.ಸಾ.5 |
| ತಂದೆಯ ಹೆಸರು | ವೆಂಕಟರಾಮಪ್ಪ | ಚಾ.ಸಾ.5 |
| ವಯಸ್ಸು | 26ವರ್ಷ | |
| ಕೆಲಸ | ವ್ಯಾಪಾರ | ಸಾ.ಪ್ರ.ವ.ಬೋ |
| ಹಾಲಿ ವಾಸ | ಶಿವನಾಪುರ | ದಿ:– 04.01.2019 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ–**

ಮೃತ ಪ್ರಭುಕುಮಾರ ನನ್ನ ತಮ್ಮ. ಈಗ ಸುಮಾರು 5 ವರ್ಷಗಳ ಹಿಂದೆ ನನ್ನ ತಮ್ಮ ಅಪಘಾತದಲ್ಲಿ ಮೃತಪಟ್ಟಿರುತ್ತಾನೆ. ನಿಪಿ.2ರಲ್ಲಿರುವ ಸಹಿ ನನ್ನದೇ. ಅದನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸರು ಈಗ ಸುಮಾರು 5 ವರ್ಷಗಳ ಹಿಂದೆ ಸ್ಥಳ ಪಂಚನಾಮೆ ಕ್ರಮ ಜರುಗಿಸಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ. ಮಹಜರು ಸಮಯದಲ್ಲಿ ಪೊಲೀಸರು ಕೆಎ–07–ಎಫ್–1671 ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಅಮಾನತ್ತುಪಡಿಸಿಕೊಂಡಿದ್ದರು. ಸದರಿ ಬಸ್ಸನ್ನು ನೋಡಿದರೆ ಗುರುತಿಸುತ್ತೇನೆ.

**ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ. 209–15**

| | | |
|---|---|---|
| ಹೆಸರು | ನವೀನ್ ಕುಮಾರ್ | ಪ್ರಾ.ಸಾ.6 |
| ತಂದೆಯ ಹೆಸರು | ನರಸಿಂಹ ಮೂರ್ತಿ | ಚಾ.ಸಾ.13 |
| ವಯಸ್ಸು | 33ವರ್ಷ | |
| ಕೆಲಸ | ಕಂಡಕ್ಟರ್ | ಸಾ.ಪ್ರ.ವ.ಬೋ |
| ಹಾಲಿ ವಾಸ | ಸಾಸಲೂರು | ದಿ:– 04.01.2019 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ः–**

ನಾನು 2013ನೇ ಸಾಲಿನಲ್ಲಿ ಕೋಲಾರ ವಿಭಾಗದ ಕೆಎ–07–ಎಫ್–1671 ಕೆ.ಎಸ್.ಆರ್.ಟಿ.ಸಿ. ಬಸ್ಸಿನ ನಿರ್ವಾಹಕನಾಗಿದ್ದೇ. ಆರೋಪಿ ಸದರಿ ಬಸ್ಸಿನ ಚಾಲಕನಾಗಿದ್ದ. ನಾವು ಹೊಸಕೋಟೆ ಮಾರ್ಗವಾಗಿ ಬೆಂಗಳೂರಿನಿಂದ ಕೋಲಾರದ ರಸ್ತೆಗೆ ಹೋಗುತ್ತಿದ್ದಾಗ, ಅತ್ತಿವಟ್ಟ ಗೇಟ್ ಬಳಿ ನಾವು ಹೋಗುತ್ತಿದ್ದ ಬಸ್ಸು, ಒಂದು ಮೋಟರ್ ಸೈಕಲ್‌ಗೆ ಡಿಕ್ಕಿ ಪಡಿಸಿ, ಅಪಘಾತವಾಗಿತ್ತು. ಮೋಟರ್ ಸೈಕಲ್ ನಲ್ಲಿದ್ದ ಇಬ್ಬರು ವ್ಯಕ್ತಿಗಳಿಗೆ ತೀವ್ರ ಸ್ವರೂಪದ ಗಾಯಗಳು ಆಗಿದ್ದವು. ಈ ವಿಚಾರವಾಗಿ ನಾನು ತನಿಖಾಧಿಕಾರಿಯ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆ ದಿನ ಬಸ್ಸನ್ನು ಚಾಲನೆ ಮಾಡುತ್ತಿದ್ದ ವ್ಯಕ್ತಿ ಈಗ ನ್ಯಾಯಾಲಯದ ಮುಂದೆ ಆರೋಪಿಯಾಗಿರುತ್ತಾನೆ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲು: ಎಪಿಪಿ ರವರಿಂದ**

ದಿ:28.10.2013 ರಂದು ಸುಮಾರು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಅಪಘಾತವಾಯಿತು ಎಂದರೆ ಸರಿ. ಸದರಿ ಅಪಘಾತವು ಆರೋಪಿಯು ಕೆ.ಎಸ್. ಆರ್.ಟಿ.ಸಿ ಬಸ್ಸನ್ನು ಅತಿ ವೇಗವಾಗಿ ಚಾಲನೆ ಮಾಡಿದ ಪರಿಣಾಮ ಅಪಘಾತವುಂಟಾಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ಪ್ರಭು ಕುಮಾರ ಎಂಬುವವರು ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ದಿ :30.10.2013 ರಂದು ತನಿಖಾಧಿಕಾರಿಯ ಮುಂದೆ ನಾನು ––––––––ಕೋರುತ್ತೇನೆಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ.5 ಎಂದು ಗುರುತಿಸಲಾಯಿತು. ನಿಪಿ.5 ರಂತೆ ಹೇಳಿಕೆ ನೀಡಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ. 209–15**

| | | |
|---|---|---|
| ಹೆಸರು | ಟಿ.ವೆಂಕಟೇಶಪ್ಪ | ಪ್ರಾ.ಸಾ.7 |
| ತಂದೆಯ ಹೆಸರು | ತಿಮ್ಮಪ್ಪ | ಚಾ.ಸಾ.14 |
| ವಯಸ್ಸು | 55ವರ್ಷ | |
| ಕೆಲಸ | ಟ್ರಾಫೀಕ್ ಕಂಟ್ರೋಲರ್ | ಸಾ.ಪ್ರ.ವ.ಬೋ |
| ಹಾಲಿ ವಾಸ | ಮಾಲೂರು | ದಿ:– 04.01.2019 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :–**

ನಾನು 8 ವರ್ಷಗಳಿಂದ ಕೋಲಾರ ವಿಭಾಗದಲ್ಲಿ ಸಂಚಾರಿ ನಿಯಂತ್ರಕನಾಗಿ ಕೆಲಸ ಮಾಡುತ್ತಿದ್ದೇನೆ.

ಕೆಎ–07–ಎಫ್–1671 ಸಂಖ್ಯೆಯ ಕೆ.ಎಸ್.ಆರ್.ಟಿ.ಸಿ ಬಸ್ಸು, ಅಪಘಾತವಾಗಿದ್ದು, ಸದರಿ ಅಪಘಾತದಲ್ಲಿ ಪೊಲೀಸರು ವಾಹನವನ್ನು ಅಮಾನತ್ತುಪಡಿಸಿಕೊಂಡಿದ್ದರು. ನಂತರ ತನಿಖಾಧಿಕಾರಿಯು ನನಗೆ ನೋಟಿಸ್ಸನ್ನು ನೀಡಿದ್ದು, ಸದರಿ ನೋಟಿಸಿಗೆ ಉತ್ತರವನ್ನು ನೀಡಿರುತ್ತೇನೆ. ನೋಟಿಸಿನಲ್ಲಿರುವ ಸಹಿ ನನ್ನದೇ. ನಿಪಿ.6 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ನಿಪಿ.7 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ವಾಹನಗೆ ಸಂಬಂಧಪಟ್ಟ ದಾಖಲಾತಿಗಳನ್ನು ಠಾಣೆಗೆ ಹಾಜರುಪಡಿಸಿ, ವಾಹನವನ್ನು ನನ್ನ ಮಧ್ಯೆ ಂತರ ವಶಕ್ಕೆ ಪಡೆದುಕೊಂಡಿರುತ್ತೇನೆ. ಇಚಿಡೆಮನಿಟಿ ಬಾಂಡನ್ನು ನಿಪಿ.8 ಎಂದು, ಸಾಕ್ಷಿ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅಪಘಾತ ಸಮಯದಲ್ಲಿ ಆರೋಪಿಯು ಸದರಿ ಬಸ್ಸಿನ ಚಾಲಕನಾಗಿದ್ದ.

**ಆರೋಪಿ ಪರ ಶ್ರಿ.ಎ.ಎನ್.ಎಸ್. ವಕೀಲರು ಹಾಜರಾಗಿದ್ದು, ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನಂತರ 3 ಗಂಟೆಗೆ ಪಾಟೀ ಸವಾಲು ಮಾಡುವುದಾಗಿ ಕೋರಿರುತ್ತಾರೆ. ಸಾಕ್ಷಿದಾರರು ಸರ್ಕಾರಿ ಅಧೀಕಾರಿಗಳಾಗಿರುವುದರಿಂದ ಮತ್ತು ಬೇರೆ ಪ್ರಕರಣಗಳಲ್ಲಿ ಸಾಕ್ಷಿ ನುಡಿಯಬೇಕೆಂದು ಹೇಳಿದ್ದು, ಸಮಯ ನೀಡಲಿಲ್ಲ. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**